ಅರ್ಜಿ ಕೊಟ್ಟ ತಕ್ಷಣ ರಿಜಿಸ್ಟರ್ ಮಾಡಿಕೊಳ್ಳಲಾಗುತ್ತದೆ. ಯಾರು ಅರ್ಜಿ ಕೊಟ್ಟವರು, ವಿಷಯ ಏನು ಎಂಬುದು ರಿಜಿಸ್ಟರ್‌ನಲ್ಲಿ ನಮೂದಿಸಲಾಗುತ್ತದೆ. ಕೆಲವೊಂದು ವಿಚಾರಗಳು ಎರಡು ಇಲಾಖೆಗೆ ಹೋಗಬೇಕಾಗಿರುತ್ತದೆ, ಅಂತಹ ಸಂದರ್ಭದಲ್ಲಿ ತಡ ಆಗುತ್ತದೆ. ಅರ್ಜಿಗಳು ಏನಾಗಿವೆ ಎಂಬುದನ್ನು ಒಂದು ತಿಂಗಳೊಳಗೆ ಕೇಂದ್ರ ಕಛೇರಿಗೆ ಜಿಲ್ಲಾಧಿಕಾರಿಗಳ ಮೂಲಕ ವಿಲೇವಾರಿ ಆಯಿತೇ ಇಲ್ಲವೇ ಎಂಬುದನ್ನು ನಮಗೆ ತಿಳಿಸಬೇಕು. ಈ ಒಂದು ಆಧಾರದ ಮೇಲೆ ನಾವು ಅರ್ಜಿಗಳನ್ನು ಕಳುಹಿಸಿದ್ದೇವೆ.

ಶ್ರೀ ವೈ. ರಾಮಕೃಷ್ಣ.— ಸುಮಾರು 379 ದೂರುಗಳು ಅಧಿಕಾರಿಗಳ ಮೇಲೆ ಬಂದಿವೆ. ಅವುಗಳನ್ನು ನೇರವಾಗಿ ವಿಜಿಲೆನ್ಸ್ ಕಮಿಷನ್‌ಗೆ ಕಳುಹಿಸುತ್ತೀರಾ? 18 ಸಾವಿರ ಅರ್ಜಿಗಳನ್ನು ಸ್ವೀಕಾರ ಮಾಡಿ ಇಟ್ಟುಕೊಂಡಿದ್ದೀರಿ. ಆ ಅರ್ಜಿಗಳ ಪಾಡೇನು? ಅನರ್ಹ ಅರ್ಜಿಗಳನ್ನು ನೋಡಿ ಕೊಳ್ಳುವುದಕ್ಕೆ ಯಾರಿದ್ದಾರೆ?

ಉಪಾಧ್ಯಕ್ಷರು.— ಅರ್ಹವಾಗಿಲ್ಲದ ಅರ್ಜಿಗಳನ್ನು ಏನು ಮಾಡುವುದಕ್ಕಾಗುತ್ತದೆ?

ಶ್ರೀ ವೈ. ರಾಮಕೃಷ್ಣ.—ಅವುಗಳನ್ನು ಡೀಲ್ ಮಾಡುವುದಕ್ಕೆ ಡಿಪಾರ್ಟ್‌ಮೆಂಟೇ ಇಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.— ಅರ್ಹತೆ ಇಲ್ಲದೆ ಇರುವ ಅರ್ಜಿಗಳು. ನಿರ್ದಿಷ್ಟವಾದ ಅಪಾದನೆ ಯಾರ ಮೇಲೂ ಇರುವುದಿಲ್ಲ. ನನ್ನನ್ನು ಬೈಯ್ದರು ಎಂದು ಅರ್ಜಿ ಕೊಟ್ಟಿರುತ್ತಾರೆ, ಯಾರು ಬೈಯ್ದರು ಎಂದು ನಿರ್ದಿಷ್ಟವಾಗಿ ತಿಳಿಸಿರುವುದಿಲ್ಲ. ನಿರ್ದಿಷ್ಟವಾದ ಅಪಾದನೆಗಳು ಬಂದರೆ ಅವುಗಳನ್ನು ವಿಜಿಲೆನ್ಸ್ ಕಮಿಷನ್‌ಗೆ ಕಳುಹಿಸತಕ್ಕ ವ್ಯವಸ್ಥೆ ಮಾಡುತ್ತೇವೆ. ನನಗೆ ಕೆಲಸ ಕೊಡಿ ಎಂದು ಬರೆದು ಕೊಳ್ಳುತ್ತಾರೆ. ಮಾಡಬಾರದ ಕೆಲಸ ಕೊಡಿಯೆಂದು ಬರೆದುಕೊಳ್ಳುತ್ತಾರೆ. ಇಲ್ಲೊಂದು ಅರ್ಜಿ ಯಾವ ರೀತಿ ಬರೆದಿದ್ದಾರೆಂದರೆ ಅದು ಈ ರೀತಿ ಇದೆ.

"ಬಂಧುಗಳು ಎನಗಿಲ್ಲ, ಬದುಕಿನಲ್ಲಿ ಸುಖವಿಲ್ಲ, ನಿಂದೆಯೊಳು ನೊಂದೆನ್ನೆ ಲಕುಮಿ ಸಾಗರನೆ" ಈ ರೀತಿ ಬರೆಯುತ್ತಾರೆ. ಇದನ್ನು ಯಾರಿಗೆ ಕಳುಹಿಸಬೇಕು? ನಾನು ಕವಿಯಲ್ಲದಿದ್ದರೂ ಈ ರೀತಿ ಬರೆದು ಕಳುಹಿಸಿದ್ದೇನೆ.

"ಮಾಡಲಾಗದ ಈ ಭವ್ಯ ವ್ಯಥೆಯ ಹೊತ್ತು ಪರನಿಂದೆಗೊಳಗಾಗಿ ನೊಂದುತಿಹನೈ
ಶ್ರೀ ಗುರುರಾಘವೇಂದ್ರ".

ಶ್ರೀ ಜಿ.ಕೆ. ಸುಬ್ಬಯ್ಯ —ಈ ಎಲ್ಲಾ ಪುಕಾರುಗಳು ಅಧಿಕಾರಿಗಳ ಮೇಲೆ ಬಂದಿವೆ. ಅಧಿಕಾರಿಗಳ ಮೇಲೆ ಬಂದಂತಹ ಪುಕಾರುಗಳನ್ನು ಮೇಲಿನಾಧಿಕಾರಿಗಳಿಗೆ ತಿಳಿಸುತ್ತೀರಿ, ಇದುವರೆಗೆ ಎಷ್ಟು ವಿಲೇವಾರಿ ಆಗಿವೆ? ಜಮೀನುಕೊಡಿ,ರಸ್ತೆ ಮಾಡಿಸಿ ಕೊಡಿ ಎಂದು ಬಂದ ಪುಕಾರುಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ. ದೂರುಗಳು ಯಾವ ರೀತಿ ಬರುತ್ತವೆ ಅಂದರೆ ವಿಲೇಜ್ ಪಂಚಾಯ್ತಿ ಸೆಕ್ರೆಟರಿ ಸೀಲ್ ಹಾಕಲಿಲ್ಲ? ಇಷ್ಟೊತ್ತಿಗೆ ಹೋಗುತ್ತಾರೆ. ಇಷ್ಟೊತ್ತಿಗೆ ಬರುತ್ತಾರೆ ಎಂದು ಅರ್ಜಿ ಬರೆಯುತ್ತಾರೆ. ಅವುಗಳನ್ನು ಮೇಲಿನಾಧಿಕಾರಿಗಳಿಗೆ ಕಳುಹಿಸುತ್ತೇವೆ. ನಿರ್ದಿಷ್ಟವಾದ ಆಪಾದನೆಗಳು ಇಲ್ಲದಿದ್ದರೆ ಕ್ರಮ ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ. ಆದರೂ ಇಂತಹ ದೂರುಗಳು ಬಂದರೆ ಮೇಲಿನಾಧಿಕಾರಿಗಳು ಗಮನ ದಲ್ಲಿಟ್ಟು ಸ್ಯಾಧ್ಯಾಸಾಧ್ಯತೆಯ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸದರಿ ಅರ್ಜಿಗಳನ್ನು ಮೇಲಿನಾಧಿ ಕಾರಿಗಳಿಗೆ ಕಳುಹಿಸಿ ಕೊಟ್ಟಿದ್ದೇವೆ.

ಶ್ರೀ ಎನ್. ಚಿಕ್ಕೇಗೌಡ.— ಮಾನ್ಯ ಕುಂದುಕೊರತೆಗಳ ಸಚಿವರು ಅನೇಕ ಅರ್ಜಿಗಳ ವಿಚಾರದಲ್ಲಿ ಹೇಳಿದ್ದಾರೆ. ಗಂಡ ನನ್ನನ್ನು ಬಿಟ್ಟಿದ್ದಾನೆ, ನನಗೆ ಗಂಡನನ್ನು ಕೊಡಿ, ನನಗೆ ಹೆಂಡತಿ ಬಿಟ್ಟಿದ್ದಾಳೆ, ನನಗೆ ಹೆಂಡತಿ ಕೊಡಿಯೆಂದು, ನನಗೆ ವಿವಾಹ ವಿಚ್ಛೇದನ ಕೊಡಿಸಿಯೆಂದು, ವರದಕ್ಷಿಣೆ ಪಿಡುಗು, ಮದುವೆ ಇಲ್ಲ, ಮದುವೆ ಮಾಡಿಸಿಕೊಡಿಯೆಂದು ಅರ್ಜಿಗಳು ಬಂದರೆ ಅವುಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು.— ಆ ಅರ್ಜಿಯನ್ನು ಬಿಕ್ಕೇಗೌಡರಿಗೇ ಕಳಿಸಿಬಿಡಿ.

ಶ್ರೀ ಸಿ. ಬೈರೇಗೌಡ.— ನನ್ನ ಕ್ಷೇತ್ರದಿಂದ ಒಬ್ಬ ವಧು 'ನಿಮನ್ನು ಮದುವೆ ಮಾಡಿಕೊಳ್ಳುತ್ತೇನೆ' ಎಂದು ಅರ್ಜಿಯನ್ನು ಕೊಟ್ಟಿರತಕ್ಕಂಥಾದ್ದು ಇವರ ಗಮನಕ್ಕೆ ಬಂದಿದೆಯೆ ? ಇದನ್ನು ಯಾವ ರೀತಿಯಲ್ಲಿ ವಿಲೇವಾರಿ ಮಾಡುತ್ತಾರೆ ಎಂದು ತಿಳಿಯಬಹುದು ?

ಶ್ರೀ ಎ. ಲಕ್ಷ್ಮೀಸಾಗರ್. — ಇಂತಹ ಅರ್ಜಿ ಯಾವುದೂ ಇದುವರೆಗೂ ನನಗೆ ಬಂದಿಲ್ಲ. ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೇನೆ.

ವಿಷಯ : ವಿಧಾನ ಮಂಡಲದ ಕಾರ್ಯಾಲಯವನ್ನು ಕಾರ್ಯಾಂಗದಿಂದ ಬೇರ್ಪಡಿಸುವ ಕುರಿತು.

ಪ್ರಶ್ನೆ : 206 (608) ಶ್ರೀ ಪಿ. ರಾಮ್‌ದೇವ್ (ಮಲ್ಲೇಶ್ವರಂ).— ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಸಚಿವ ಸಂಪುಟವು ವಿಧಾನಮಂಡಲದ ಕಾರ್ಯಾಲಯವನ್ನು ಕಾರ್ಯಾಂಗದಿಂದ ಬೇರ್ಪಡಿಸಲು ತೀರ್ಮಾನವನ್ನು ತೆಗೆದುಕೊಂಡಿದೆಯೇ;

ಆ) ಈ ಬಗ್ಗೆ ಸೂಕ್ತ ಆದೇಶವನ್ನು ಹೊರಡಿಸಲಾಗಿದೆಯೇ;

ಇ) ಇಲ್ಲದಿದ್ದಲ್ಲಿ ಸಚಿವ ಸಂಪುಟದ ತೀರ್ಮಾನವನ್ನು ಕಾರ್ಯರೂಪಕ್ಕೆ ತರಲು ವಿಳಂಬಕ್ಕೆ ಕಾರಣ ?

ಉತ್ತರ : ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ಸಂವಿಧಾನದ ಅನುಚ್ಛೇದ 187 (1) ರಲ್ಲಿ ಒದಗಿಸಿರುವಂತೆ ಕರ್ನಾಟಕ ವಿಧಾನ ಮಂಡಲಕ್ಕೆ ಪ್ರತ್ಯೇಕ ಕಾರ್ಯಾಲಯ ಸಿಬ್ಬಂದಿಯು ಇದೆ. ಸಚಿವ ಸಂಪುಟವು ವಿಧಾನ ಮಂಡಲ ಕಾರ್ಯಾಲಯಕ್ಕೆ ಸಂಬಂಧಪಟ್ಟ ನಿಯಮಗಳನ್ನು ತಿದ್ದುಪಡಿ ಮಾಡಲು ತೀರ್ಮಾನಿಸಿದೆ.

ಆ) ಇಲ್ಲ. ವಿವರಗಳನ್ನು ಪರಿಶೀಲಿಸಲಾಗುತ್ತಿದೆ.

ಇ) ವಿವರಗಳನ್ನು ಪರಿಶೀಲಿಸಬೇಕಾಗಿರುವುದರಿಂದ ಮತ್ತು ಕೆಲವು ಕಾರ್ಯವಿಧಾನದ ಔಚಿತ್ಯ ಸಂಪ್ರದಾಯಗಳನ್ನು ಅನುಸರಿಸಬೇಕಾಗಿರುವುದರಿಂದ ಸಚಿವ ಸಂಪುಟದ ತೀರ್ಮಾನವನ್ನು ಈವರೆಗೆ ಕಾರ್ಯರೂಪಕ್ಕೆ ತರಲಾಗಲಿಲ್ಲ.

ಶ್ರೀ ಪಿ. ರಾಮ್‌ದೇವ್ — ಅಧ್ಯಕ್ಷರೇ, ಸಂವಿಧಾನದ ಅನುಚ್ಛೇದ 187 (1)ರ ಪ್ರಕಾರ ವಿಧಾನ ಮಂಡಲಕ್ಕೆ ಪ್ರತ್ಯೇಕ ಕಾರ್ಯಾಲಯ ಮತ್ತು ಸಿಬ್ಬಂದಿ ಇದೆಯೆಂದು ಉತ್ತರ ಕೊಟ್ಟಿದ್ದೀರಿ. ಇದರಲ್ಲಿ ರೂಲ್ಸ್ ಆಫ್ ರಿಕ್ರೂಟ್‌ಮೆಂಟ್ ಯಾವ ರೀತಿ ಮಾಡಿದ್ದೀರಿ ?

ಶ್ರೀ ಎ ಲಕ್ಷ್ಮೀಸಾಗರ್. —ಈ ವಿಷಯದಲ್ಲಿ ಅಂತಿಮ ಹಂತದಲ್ಲಿ ಸ್ವಲ್ಪ ಸಂಶಯ ಇರುವ ಹಾಗೆ ಕಾಣುತ್ತದೆ. ಆದರೆ ಈ ವಿಷಯದ ಬಗ್ಗೆ ಸರ್ಕಾರದ ನಿಲುವು ಮಾತ್ರ ಅಚಲವಾಗಿದೆ. ಸ್ವಯಂಪ್ರೇರಿತರಾಗಿ ಇದನ್ನು ಮಾಡುತ್ತೇವೆ ಎಂದು ಹೇಳಿದವರು ನಾವು. ಇದಾದ ಮೇಲೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಕಾನೂನು ಮತ್ತು ನಿಯಮಾವಳಿಗಳನ್ನು ರಚನೆ ಮಾಡಿ ವಿಧಾನಸೌಧದ ಕಾರ್ಯಾಲಯಕ್ಕೆ ಕಳಿಸಿದ್ದೆವು ಅವರು ಕೆಲವು ತಿದ್ದುಪಡಿಗಳನ್ನು ಮಾಡಬೇಕೆಂದು ಹೇಳಿದರು. ಅದನ್ನು ಅಳವಡಿಸಿಕೊಂಡು ಸಚಿವ ಸಂಪುಟದ ಒಪ್ಪಿಗೆಯನ್ನು ತೆಗೆದುಕೊಂಡು ರಾಜ್ಯಪಾಲರಿಗೆ ಕಳಿಸಿದ್ದೆವು ಗವರ್ನರ್ ಕಡೆಯಿಂದ ಸ್ವಲ್ಪ ವ್ಯತ್ಯಾಸ ಆಗಬೇಕೆಂದು ಹೇಳಿದರು. ಅದನ್ನು ಮಾಡಿ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಸಚಿವ ಸಂಪುಟದ ಅನುಮತಿಯನ್ನು ಪಡೆದುಕೊಂಡು ಮತ್ತೆ ರಾಜ್ಯಪಾಲರಿಗೆ ಈಗ ಕಳಿಸಿದ್ದೇವೆ ನಮ್ಮಲ್ಲಿ ವಿಳಂಬ ಆಗಿಲ್ಲ. ವಿಧಾನ ಮಂಡಲ ಪ್ರತ್ಯೇಕ ಆಗಲಿಕ್ಕೆ ಅಚಲವಾದ ಸ್ಥಿರವಾದ ನಂಬಿಕೆ ನಮ್ಮದಾಗಿದೆ.

ಶ್ರೀ ವೈ. ರಾಮಕೃಷ್ಣ.— ಕಳೆದ ವರ್ಷ ನಿಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಕಾರ್ಯಾಂಗದಿಂದ ವಿಧಾನಮಂಡಲವನ್ನು ಪ್ರತ್ಯೇಕ ಗೊಳಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೀರಿ. ಈ ಬಾಬಿಗೋಸ್ಕರ 20 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ ಎಂದು ಬಹಿರಂಗವಾಗಿ ಹೇಳಿದ್ದು ನಿಜವಲ್ಲವೇ ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಎಷ್ಟು ಹಣ ಖರ್ಚು ಮಾಡಿದ್ದೀರಿ ? ಅಂತಿಮ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಇನ್ನೆಷ್ಟು ದಿವಸ ಬೇಕು ?

ಶ್ರೀ ಎ. ಲಕ್ಷ್ಮೀಸಾಗರ್.— ಭಾಗಶಃ ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ. ಕನ್ನಡದಲ್ಲಿ ನಾನು ಉತ್ತರ ಕೊಟ್ಟಿದ್ದು ಮಾನ್ಯ ಸದಸ್ಯರಿಗೆ ಅರ್ಥವಾಗಿಲ್ಲವೆಂದು ಕಾಣುತ್ತದೆ. So far as the expenditure to be incurred by the Legislature Secretariat is concerned, the practice is to set monies apart under the budget. This is borne out by facts. Whether the expenditure is incurred or not will be known when the budget proposals are presented before the House. That is not the point. The point is on our own volition we have taken decision and in implementing the decision several points have come in and all those points are being met, We took the decision some time in May 1983. There after when we mooted and details were worked out, there were some objectitions or deficiencies in the decision we had taken which were pointed out by the Legislature Secretariat. We adumbrated that point. Cabinet approval was taken and it was sent to the Governor for his approval and the Governor in his turn pointedout some deficiencies in the proposals we had adumbrated. We incorporated his suggestions also, got the Cabinet approval

and again it has been sent to him This is the stage at which it stands. There has been no lapse, there has been no hesitation on the part of the Government. We have been very quick in this behalf. It is our own brain-child. My learned friend was the Law Minister and he refused to give me a categorical reply when I, as the Leader of Opposition, asked him whether or not the Government was prepared to make the Legislature Secretariat independent of the executive. Now he is finding fault with me for making a declaration and not doing it and asking how many years it will take. Sir, before his term comes to an end.

Sri Y. Ramakrishna. — Why do you quote me? I never assured the House that I was going to do it. Now that you have assured and said that you have set apart money, I want to know in how many years you will do it.

Sri A Lakshmisagar — Very soon, as soon as it is cleared by the Governor. it will be done.

ಶ್ರೀ ಎಂ. ವೀರಪ್ಪ ಮೊಯಿಲಿ.— ಸನ್ಮಾನ್ಯ ಅಧ್ಯಕ್ಷರೇ, ಪ್ರಾರಂಭದಲ್ಲಿ ಅಧಿಕಾರಕ್ಕೆ ಬಂದ ಕೂಡಲೇ 20 ಕೋಟಿ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.— 20 ಕೋಟಿ ರೂಪಾಯಿ ಕೊಟ್ಟಿದ್ದೇವೆ ಅಂತ ಅಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ದಯವಿಟ್ಟು ಕೇಳಿ. 20 ಕೋಟಿ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಈ ಶಾಸಕಾಂಗಕ್ಕೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ತಪ್ಪು ಹೇಳಿಕೆಯನ್ನು ಕೊಟ್ಟಿದ್ದೀರಿ. ಒಂದು ವರ್ಷ ಆದ ಮೇಲೆ 20 ಕೋಟಿ ಅಲ್ಲವೆಂದು ಹೇಳಿದ್ದೀರಿ. Budget provision for the Legislature is two crores. It is a mistake.

Sri A Lakshmisagar.— What is set apart in the Budget is the amount. I can't make a commitment other than what is provided in the Budget.

Sri M. Veerappa Moily — What is provided in the Budget is 2 crores and not 20 crores ದಯವಿಟ್ಟು ಸರಿಯಾಗಿ ತಿಳಿದುಕೊಂಡು ಉತ್ತರ ಕೊಡಿ. ದಯವಿಟ್ಟು ಪರಿಶೀಲಿಸಿ ನೋಡಿ. ತಪ್ಪನ್ನು ಏಕೆ ಸಾಧನೆ ಮಾಡುತ್ತೀರಿ ? The House should not be misled.

Sri A Lakshmisagar.— I am not misleading.

Sri M. Veerappa Moily — It is patently wrong. Who will give Rs. 2o crores for the Legislature Department in the Budget? As a former Finance Minister, I know it. Of course, we are not going to bring any privilege motion.

Mr. Speaker — Whatever is said outside the House ....

Sri. M Veerappa Moily— Even on the floor of the House the Hon. Minister is maintaining that it is Rs 20 crores and not 2 crores. ಅಧ್ಯಕ್ಷರೆ, ಈ ಕ್ಯಾಬಿನೆಟ್‌ನಲ್ಲಿ ನಿರ್ಣಯ ತೆಗೆದುಕೊಂಡಿರುವುದನ್ನು ಜಾರಿ ಮಾಡುವುದಕ್ಕೆ ಇವತ್ತೂ ಕೂಡ ಸರ್ಕಾರಿ ಆಜ್ಞೆ ಹೊರಡಿಸಿಲ್ಲ.

ಶ್ರೀ ಎ ಲಕ್ಷ್ಮೀಸಾಗರ್.— ಕೆಲವು ವಾರಗಳ ಹಿಂದೆ ಇದು ನಿರ್ಣಯ ಆಗಿ ರಾಜ್ಯಪಾಲರಿಗೆ ಕಳಿಸಿದ್ದೇವೆ. ನನಗೆ ಆರ್ಥವಾಗದ ವಿಚಾರ ಏನೆಂದರೆ ಅವರ ಸರ್ಕಾರ ಮೂರು ವರ್ಷಗಳ ಕಾಲ ಇತ್ತು. ಆಗ ಇದರ ಬಗೆ ಚಕಾರ ಕೂಡ ಎತ್ತಲಿಲ್ಲ. ಇದನ್ನು ನಾವೀಗ ಸ್ವಯಂ ಪ್ರೇರಣೆಯಿಂದ ಮಾಡಿದ್ದೇವೆ. What is the central point ? The desire and the decision of this Government is to make the Legislature independent of the executive. That is being implemented. The delay is not entirely on account of the Government.

Sri K. G Maheshwarappa.— Under Article 187 (2) The State Government may make rules regarding regulating recruitment and conditions of services of personnel appointed. Is the Government proposing to make any law in this behalf ?

Sri A Lakshmisagar.— I am not using the language of clause 2 of article 189 but in substance that point is engaging the attention and that is cleared by the Government. May I make onemore submission ? The pattern in the States of Maharashtra, Kerala, Tamil Nadu and Andhra Pradesh have all been studied. The Same situation that is prevailing in all these States is sought to be brought in here under this article.

ಶ್ರೀ ಎಂ. ವೀರಪ್ಪ ಮೊಯಿಲಿ.— ಈಗ ಪಾರ್ಲಿಮೆಂಟ್‌ನಲ್ಲಿ ರೆಕ್ರೂಟ್‌ಮೆಂಟ್ ರೂಲ್ಸ್ ಫಾರಂನಲ್ಲಿ ಏನು ಇದೆ ಆ ಪ್ರಕಾರ ಇಲ್ಲಿ ಮಾಡಬೇಕು. ಈ ಬಗ್ಗೆ ಕೇರಳದಲ್ಲಿ ಈಗಾಗಲೇ ಅವರಿಗೆ ಮಿನಿಮಮ್ ಪವರ್ಸ್ ಕೊಟ್ಟಿದ್ದಾರೆ. ಈ ಸರ್ಕಾರ ಇದನ್ನು ಇನ್ನೂ ಕೂಡ ತನ್ನ ಹೆತೋಟಿಯಲ್ಲಿಟ್ಟು ಕೊಳ್ಳಬೇಕು ಎಂದು ಈ ರೀತಿ ಅನುಮಾನ ಮಾಡತಕ್ಕಂಥಾದ್ದು ಸರಿಯೇ ?

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರು ಕೇರಳದಲ್ಲಿ ಯಾವರೀತಿ ಇದೆ ಎಂದು ತಿಳಿದು ಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಮಹಾರಾಷ್ಟ್ರದಲ್ಲಿ ಯಾವ ರೀತಿಯಾಗಿದೆ ಎಂದು ತಿಳಿದುಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಈ ಬಗ್ಗೆ ಅವರೇ ಬೇಕಾದರೆ ಅಲ್ಲಿಂದ ಇನ್‌ಫರ್ಮೇಷನ್ ತಿಳಿದು ಕೊಂಡು ನನಗೆ ಪಾಸ್‌ಆನ್ ಮಾಡಿದರೆ ವಿಚಾರ ತಿಳಿದುಕೊಂಡು ತೀರ್ಮಾನ ತೆಗೆದುಕೊಳ್ಳಬಹುದು. ಅದರ ಬಗ್ಗೆ ಕ್ಲಿಯರ್ ಆದ ತಕ್ಷಣ ಏನಾಗುತ್ತದೆ ಅನ್ನುವುದನ್ನು ತಿಳಿಸುತ್ತೇನೆ.

Sri K G. Maheshwarappa.— Until the rules are made under clause (3) of 187, Government may after consultation with the Speaker of Legislative Assembly or the Chairman of the Legislative Council may make the rules regulating recruitment.

Sri A. Lakshmisagar — That is the present position. In order to give effect to the declaration of the Government, rules are being framed under article 187.

ಅಧ್ಯಕ್ಷರು.— ಪ್ರಶ್ನೆ 207 (684) ಮತ್ತು ಪ್ರಶ್ನೆ 208 (664) ಶ್ರೀ ಆರ್. ಎನ್ ನಾಯಕ್ ಮತ್ತು ಶ್ರೀ ಎ. ನಾಗರಾಜು ಈ ಎರಡು ಪ್ರಶ್ನೆಗಳನ್ನು ಆಮೇಲೆ ತೆಗೆದುಕೊಳ್ಳುತ್ತೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾಗಿ ಉತ್ತರ ಬಂದಿಲ್ಲ ಎಂದು ನನಗೆ ಕಾಗದ ಬರೆದಿರುವುದರಿಂದ ಆಮೇಲೆ ನಾನೇ ತೆಗೆದುಕೊಳ್ಳುತ್ತೇನೆ.

ವಿಷಯ : ರಾಜ್ಯದಲ್ಲಿ 10 ತಿಂಗಳಿಂದೀಚೆಗೆ ಜಪ್ತಿ ಮಾಡಲಾದ ಬಸ್ಸುಗಳು.

ಪ್ರಶ್ನೆ : 192 (215) ಶ್ರೀ ಎಂ. ಜಿ. ಜರತಾರಗಾರ್ (ಹುಬ್ಬಳ್ಳಿ).— ಮಾನ್ಯ ರಾಜ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯ ಸಾರಿಗೆ ಇಲಾಖೆಯವರು ಪರವಾನಿಗೆ ಕೊಡದೇ ರಸ್ತೆಗಳಲ್ಲಿ 10 ತಿಂಗಳಿಂದ ಈವರೆಗೆ ಪ್ರಯಾಣಿಕರನ್ನು ಬಸ್ಸುಗಳಲ್ಲಿ ಒಯ್ಯುತ್ತಿದ್ದಾಗ್ಗೆ ರಾಜ್ಯದಲ್ಲಿ ಜಪ್ತಿ ಮಾಡಿದ ಬಸ್ಸುಗಳೆಷ್ಟು ಹಾಗೂ ಯಾವ ತಿಂಗಳಲ್ಲಿ ಎಷ್ಟನ್ನು ಜಪ್ತಿ ಮಾಡಲಾಗಿದೆ;

ಆ) ಹುಬ್ಬಳ್ಳಿ, ಧಾರವಾಡ ಹಾಗೂ ಬೆಳಗಾಂಗಳಲ್ಲಿ ಪರ್ಮಿಟ್ ಇಲ್ಲದೆ ಇದ್ದ ಬಸ್ಸು ಜಪ್ತಿ ಮಾಡಿದವುಗಳೆಷ್ಟು ಹಾಗೂ ಎಷ್ಟು ತಿಂಗಳ ಅವಧಿ ಮೀರಿದ್ದವುಗಳೆಂಬ ವಿವರಗಳನ್ನೊದಗಿಸುವುದು;

ಇ) ನಮ್ಮ ರಾಜ್ಯದಿಂದ ಭಾರತಾದ್ಯಂತ ಓಡಾಡಲು ಕಳೆದ 10 ತಿಂಗಳಲ್ಲಿ ತಾತ್ಕಾಲಿಕ ಹಾಗೂ ಖಾಯಂ ಪರವಾನಿಗೆ ಕೊಟ್ಟ ಬಸ್ಸುಗಳೆಷ್ಟು ಎಂಬುದನ್ನು ಸವಿಸ್ತಾರ ಮಾಹಿತಿಯನ್ನೊದಗಿಸುವುದು;

ಈ) ಮಹಾರಾಷ್ಟ್ರ ಹಾಗೂ ಆಂಧ್ರ ಹಾಗೂ ತಿಮಿಳುನಾಡುಗಳಲ್ಲಿ ಖಾಸಗಿಯವರ ಬಸ್ಸುಗಳಿಗೆ ಖಾಯಂ ಹಾಗೂ ತಾತ್ಕಾಲಿಕ ಪರವಾನಿಗೆ ಕೊಡುವಂತೆ ಸರಕಾರಗಳಲ್ಲಿಯೂ ವ್ಯವಸ್ಥೆ ಇದೆಯೇ ಹಾಗಿಲ್ಲದಿದ್ದರೆ ಯಾವ ಧೋರಣೆ ಪರ ಪ್ರಾಂತದಲ್ಲಿದೆ ಎಂಬುದನ್ನು ತಿಳಿಸಬೇಕಾಗಿ ವಿನಂತಿ ?